# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ, ಲಗ್ಗೆರೆ ಉಪವಿಭಾಗ, 1ನೇ ಮುಖ್ಯರಸ್ತೆ, 3ನೇ ಬ್ಲಾಕ್, ಝೂನ್ ಪಾರ್ಕ್ ಕಾಂಪೌಂಡ್, ನಾಗರಬಾವಿ 2ನೇ ಹಂತ, ಬೆಂಗಳೂರು–560 072**

**ವಾರ್ಡ್ ಸಂಖ್ಯೆ 73 ರಲ್ಲಿ  ದಿನಾಂಕ:–07.12.2020 ರಲ್ಲಿ ನಡೆದ ವಾರ್ಡ್ ಸಮಿತಿ ಸಭಾ ನಡವಳಿಗಳು.**

ಕೆಳಕಂಡ ಸದಸ್ಯರು ಹಾಗೂ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿರುತ್ತಾರೆ.

1. ಶ್ರೀ.ವಿಜಯ್ ಕುಮಾರ್, ಮುಖ್ಯ ಅಭಿಯಂತರರು, ರಾರಾನಗರ,  ಹಾಗೂ ನೊಡಲ್ ಅಧಿಕಾರಿ–73, ಕೊಟ್ಟಿಗೆಪಾಳ್ಯ.
2. ಶ್ರೀ.ಜಿ.ಮೋಹನ್ ಕುಮಾರ್, ಮಾಜಿ ಸದಸ್ಯರು, ಬಿ.ಬಿ.ಎಂ.ಪಿ, ವಾ–73 ಕೊಟ್ಟಿಗೆಪಾಳ್ಯ
3. ಶ್ರೀ.ಡಿ.ಭೀಮಾನಾಯ್ಕ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಲಗ್ಗೆರೆ ಉಪವಿಭಾಗ.
4. ಶ್ರೀ. ನವೀನ್ ಆರ್, ಸಹಾಯಕ ಅಭಿಯಂತರರು, ವಾರ್ಡ 73.
5. ಶ್ರೀ.ವಿನಾಯಕ ದತ್ತ ನಾಯ್ಕ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ, ಕೊಟ್ಟಿಗೆಪಾಳ್ಯ
6. ಶ್ರೀ.ಎಸ್.ವಸಂತ್ ಕುಮಾರ್, ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ, ಕೊಟ್ಟಿಗೆಪಾಳ್ಯ
7. ಶ್ರೀ.ಸಿ.ಪಿ.ಹನುಮಂತರಾಜು, ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ, ಕೊಟ್ಟಿಗೆಪಾಳ್ಯ
8. ಶ್ರೀ. ಚನ್ನೇಗೌಡ, ಕಿರಿಯ ಅಭಿಯಂತರರು, ಬೆಸ್ಕಾಂ
9. ಶ್ರೀ ನಂಜುಂಡಪ್ಪ, ಕಿರಿಯ ಆರೋಗ್ಯ ಪರಿವೀಕ್ಷಕರು
10. ಶ್ರೀ.ಪಿ.ವಿಜಯ ರಾಘವನ್, ಕಿರಿಯ ಆರೋಗ್ಯ ಪರಿವೀಕ್ಷಕರು
11. ಸಂಘ ಸಂಸ್ಥೆಗಳ ಮುಖಂಡರುಗಳು

ವಾರ್ಡ್ ಸಮಿತಿಯ ಪ್ರಾಸ್ತಾವಿಕ ಸಭೆಯ ಉದ್ದೇಶವನ್ನು ತಿಳಿಸಿ, ಸಭೆಯಲ್ಲಿ ಉಪಸ್ಥಿತರಿದ್ದ ಅಧ್ಯಕ್ಷರು ಸದಸ್ಯರು ಹಾಗೂ ಎಲ್ಲಾ ಅಧಿಕಾರಿಗಳನ್ನು ಸ್ವಾಗತಿಸಿ ಸಭೆಯನ್ನು ನಡೆಸಲು ವಾರ್ಡ್ ಸಮಿತಿ ಅಧ್ಯಕ್ಷರನ್ನು ಕೋರಲಾಯಿತು.

**ವಾರ್ಡ್ ವ್ಯಾಪ್ತಿಯಲ್ಲಿನ ಘನತ್ಯಾಜ್ಯ ನಿರ್ವಹಣೆ ಬಗ್ಗೆ ಚರ್ಚಿಸುವ ವಿಚಾರ.**

ಘನತ್ಯಾಜ್ಯ ನಿರ್ವಹಣೆ ಬಗ್ಗೆ ಕೂಲಂಕುಷವಾಗಿ ಚರ್ಚಿಸಲಾಗಿ ಈ ಕೆಳಕಂಡಂತೆ ಕ್ರಮ ಕೈಗೊಳ್ಳಲು ಹಿರಿಯ ಮತ್ತು ಕಿರಿಯ ಆರೋಗ್ಯ ಪರಿವೀಕ್ಷಕರುಗಳಿಗೆ ಸೂಚಿಸಲಾಯಿತು.

1. ಕೊಟ್ಟಿಗೆಪಾಳ್ಯ ಮುಖ್ಯರಸ್ತೆಯಲ್ಲಿ ಕಸ ಶೇಖರಣೆಗಾಗಿ, ಕಸ ವಿಲೇವಾರಿ ವಾಹನಗಳು ಬರುತ್ತಿರುವುದರಿಂದ, ಸದರಿ ಸ್ಥಳವನ್ನು ಬದಲಿಸಲು ಕೋರಿರುತ್ತಾರೆ.
2. ನಮ್ಮೂರ ತಿಂಡಿಯಲ್ಲಿ ಕಸ ಮತ್ತು ಕಸ ಗುಡಿಸುವ ಯಂತ್ರವನ್ನು ಅಳವಡಿಸುವ ಬಗ್ಗೆ ಶ್ರೀ.ನಂದೀಶ್, ಕಾರ್ಯಪಾಲಕ ಅಭಿಯಂತರರು (ಮೇಜರ್ ರೋಡ್ಸ್) ರವರಿಗೆ ಮಾಹಿತಿಯನ್ನು ರವಾನಿಸಲು ತಿಳಿಸಿರುತ್ತಾರೆ.
3. ಸೋಫಿಯ ಶಾಲೆ ಮತ್ತು ತೆರಿಗೆ ಭವನ ಸುತ್ತ ಮುತ್ತಲಿನ ಪ್ರದೇಶದಲ್ಲಿ ಕಸ ವಿಲೇವಾರಿ ಮಾಡುವಂತೆ ಕೋರಿರುತ್ತಾರೆ.

4. ಮಲ್ಲೈಮಹದೇಶ್ವರ ಬಡಾವಣೆ, 9ನೇ ಬ್ಲಾಕ್ ಮತ್ತು 11ನೇ ಬ್ಲಾಕ್‌ಗಳಿಗೆ ಸ್ಥಳ ಪರಿವೀಕ್ಷಣೆ ಮಾಡುವಂತೆ ತಿಳಿಸಿರುತ್ತಾರೆ.
5. ಸುಂಕದಕಟ್ಟೆ ಸುತ್ತುಮುತ್ತಲಿನ ರಸ್ತೆಗಳಲ್ಲಿ ಕೇವನ 4–5 ದಿನಗಳು ಮಾತ್ರ ಕಸದ ಶೇಖರಣೆ ವಾಹನಗಳು ಬರುತ್ತಿರುವುದರಿಂದ ಅದನ್ನು ತುರ್ತಾಗಿ ಕ್ರಮ ಕೈಗೊಳ್ಳುವಂತೆ ತಿಳಿಸಿರುತ್ತಾರೆ.

**ವಾರ್ಡ್ ವ್ಯಾಪ್ತಿಯಲ್ಲಿನ ಬೃಹತ್ ನೀರುಗಾಲುವೆ ಬಗ್ಗೆ ಚರ್ಚಿಸುವ ವಿಚಾರ.**

1. 9ನೇ ಬ್ಲಾಕ್‌ನಲ್ಲಿ ಮಳೆ ನೀರುಗಾಲುವೆಯಿಂದ ನೀರು ಹಿಂಪಡೆಯಾಗಿ ಹರಿಯುತ್ತಿರುವುದರಿಂದ ಅದಕ್ಕೆ ಎಲ್‌ಬೋ ಅಳವಡಿಸಲು 50 ಸಾವಿರ ರೂಗಳು ಅವಶ್ಯಕವಾಗಿರುವುದೆಂದು ಶ್ರೀ.ರಾಘವೇಂದ್ರ.ಸ.ಕಾ.ಅ (ಬೃಹತ್ ನೀರುಗಾಲುವೆ) ರವರು ತಿಳಿಸಿರುತ್ತಾರೆಂದು ಶ್ರೀ.ಶಿವಣ್ಣ ರವರು ಸಭೆಯಲ್ಲಿ ಪ್ರಸ್ತಾಪಿಸಿರುತ್ತಾರೆ.
2. ಸುಂಕದಕಟ್ಟೆ ಸುತ್ತಮುತ್ತಲಿನ ಪ್ರದೇಶಗಳಿಗೆ ದಿನಾಂಕ:.14.12.2020 ರಂದು ಸಹಾಯಕ ಕಾರ್ಯಪಾಲಕ ಅಭಿಯಂತರರರು (ಘನತ್ಯಾಜ್ಯ) ರವರೊಂದಿಗೆ ಸ್ಥಳ ವೀಕ್ಷಣೆಗಾಗಿ ನಡೆಸುವಂತೆ ತಿಳಿಸಿರುತ್ತಾರೆ.

**ವಾರ್ಡ್ ವ್ಯಾಪ್ತಿಯಲ್ಲಿನ ಕಾಮಗಾರಿಗಳು ಮತ್ತು ರಸ್ತೆ ಗುಂಡಿಗಳ ದುರಸ್ಥಿಪಡಿಸುವ ಬಗ್ಗೆ ಚರ್ಚಿಸುವ ವಿಚಾರ.**

1. ಸುಂಕದಕಟ್ಟೆ ಸುತ್ತ ಮುತ್ತಲಿನ ಪ್ರದೇಶಗಳಿಗೆ 2 ಕಲ್ವರ್ಟ್‌ಗಳ ಅವಶ್ಯಕತೆಯಿರುವುದೆಂದು ಶ್ರೀಮತಿ.ಸುಮಿತ್ರಮ್ಮ ರವರ ನೋಡೆಲ್ ಅಧಿಕಾರಿಗಳಿಗೆ ತಿಳಿಸಿರುತ್ತಾರೆ.
2. 11ನೇ ಬ್ಲಾಕ್, ತೆರಿಗೆ ಭವನ ಮುಖ್ಯರಸ್ತೆಯಲ್ಲಿ Intensive Cleaning ನಡೆಸಲು ಮುಖ್ಯ ಅಭಿಯಂತರರು ವಾ–73 ಸಹಾಯಕ ಅಭಿಯಂತರವರಿಗೆ ಸೂಚಿಸಿರುತ್ತಾರೆ.
3. 9ನೇ ಬ್ಲಾಕ್‌ನಲ್ಲಿ ಲೈಬ್ರರಿ ಜೀರ್ಣೋದ್ದಾರದ ಬಗ್ಗೆ ತುರ್ತಾಗಿ ಕ್ರಮ ಕೈಗೊಳ್ಳಲು ಶ್ರೀ.ಕುಮಾರಸ್ವಾಮಿ ರವರು ತಿಳಿಸಿರುತ್ತಾರೆ.
4. ಸಜ್ಜೇಪಾಳ್ಯ ಚರಂಡಿಗಳ ದುರಸ್ಥಿಯ ಕಾರ್ಯವನ್ನು ಶೀಘ್ರವಾಗಿ ಮುಗಿಸಲು ಮಾನ್ಯ ಮಾಜಿ ಸದಸ್ಯರಾದ ಶ್ರೀ.ಜಿ.ಮೋಹನ್ ಕುಮಾರ್ ರವರು ತಿಳಿಸಿರುತ್ತಾರೆ.
5. ರಸ್ತೆ ಗುಂಡಿ ಮತ್ತು ಅಗೆತದ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಲು ಶ್ರೀ.ಸಂತೋಷ್ ರವರು ತಿಳಿಸಿರುತ್ತಾರೆ.

**ವಾರ್ಡ್ ವ್ಯಾಪ್ತಿಯಲ್ಲಿ ಪ್ರಗತಿಯಲ್ಲಿರುವ ಬಿ.ಡಬ್ಲ್ಯೂ.ಎಸ್.ಎಸ್.ಬಿ ಕಾಮಗಾರಿಗಳಾದ ಕುಡಿಯುವ ನೀರು ಮತ್ತು ಒಳಚರಂಡಿಯ ಬಗ್ಗೆ ಚರ್ಚಿಸುವ ವಿಚಾರ.**

1. ವ್ಯಾರ್ಡ್‌ಗೆ ಸಂಬಂಧಪಟ್ಟ ಅಂಬೇಡ್ಕರ್ ಕಾಲೇಜ್ ಬಳಿ ಸ್ಯಾನಿಟರಿ ಪೈಪ್‌ಗಳು ಒಡೆದು ಹೋಗಿದ್ದು, ಇದರ ದುರಸ್ಥಿ ಕಾರ್ಯವನ್ನು ನಡೆಸಲು ಬಿ.ಡಬ್ಲ್ಯೂ.ಎಸ್.ಎಸ್.ಬಿ, ರವರಿಗೆ ನೋಡಲ್ ಅಧಿಕಾರಿ ರವರು ತಿಳಿಸಿರುತ್ತಾರೆ.

**ವಾರ್ಡ್ ವ್ಯಾಪ್ತಿಯಲ್ಲಿ ಪ್ರಗತಿಯಲ್ಲಿರುವ ಬೆಸ್ಕಾಂ ಚರ್ಚಿಸುವ ವಿಚಾರ.**

1. ವಿದ್ಯುತ್ ವ್ಯತ್ಯಯದ ಬಗ್ಗೆ ಗಮನಹರಿಸಲು ನೋಡಲ್ ಅಧಿಕಾರಿ ರವರು ತಿಳಿಸಿರುತ್ತಾರೆ.

**ವಾರ್ಡ್ ವ್ಯಾಪ್ತಿಯಲ್ಲಿ ಪಶು ಸಂಗೋಪನೆ ಇಲಾಖೆಯ ಬಗ್ಗೆ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಚರ್ಚಿಸುವ ವಿಚಾರ.**

1. ವಾರ್ಡ್ ವ್ಯಾಪ್ತಿಗೆ ಒಳಪಟ್ಟಂತೆ 9ನೇ ಬ್ಲಾಕ್‌ನಲ್ಲಿ ನಾಯಿಗಳ ಸಂಖ್ಯೆ ಹೆಚ್ಚಾಗಿದ್ದು, ಅದರ ಬಗ್ಗೆ ಕ್ರಮಕೈಗೊಳ್ಳುವಂತೆ ಶ್ರೀ.ಶಿವಣ್ಣ ರವರು ಸಭೆಯಲ್ಲಿ ಸೂಚಿಸಿರುತ್ತಾರೆ.

2. ಪಶುಸಂಗೋಪನಾ ಅಧಿಕಾರಿ ರವರುಗಳು ಮುಂದಿನ ಸಭೆಗೆ ಹಾಜರಾಗುವಂತೆ ನೋಡಲ್ ಅಧಿಕಾರಿ ರವರು ತಿಳಿಸಿರುತ್ತಾರೆ.

**ಮೇಲ್ಕಂಡ ಎಲ್ಲಾ ಅಂಶಗಳಿಗೂ ಕ್ರಮ ಕೈಗೊಳ್ಳಬೇಕಾದ ಎಲ್ಲಾ ಅಧಿಕಾರಿಗಳು ಸೂಕ್ತ ಕ್ರಮ ತೆಗೆದುಕೊಂಡು ಮುಂದಿನ ಸಭೆಗೆ ಪೂರ್ಣ ಮಾಹಿತಿಯೊಂದಿಗೆ ಎಲ್ಲಾ ಅಧಿಕಾರಿಗಳು ಹಾಜರಾಗಲು ಮಾನ್ಯ ಅಧ್ಯಕ್ಷರು ಸಭೆಯಲ್ಲಿ ಸೂಚಿಸಿದರು.**

ಮುಂದಿನ ಸಭೆಯಲ್ಲಿ ಸಾಧಿಸಬೇಕಾದ ಗುರಿ ಹಾಗೂ ಸಾಧನೆ ಬಗ್ಗೆ ಚರ್ಚಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ವಂದನಾರ್ಪಣೆಯೊಂದಿಗೆ ಕಾರ್ಯದರ್ಶಿಗಳು ಸಭೆಯನ್ನು ಮುಕ್ತಾಯಗೊಳಿಸಿದರು.

ಸಹಿ:–

| | |
|---|---|
| **ಸದಸ್ಯ ಕಾರ್ಯದರ್ಶಿ** | **ವಾರ್ಡ್ ಸಮಿತಿ ಅಧ್ಯಕ್ಷರು,** |
| **ಹಾಗೂ ಸಹಾಯಕ ಅಭಿಯಂತರರು** | **ಮುಖ್ಯ ಅಭಿಯಂತರು(ರಾ.ರಾ.ನ)** |
| **ವಾರ್ಡ್ ನಂ. 73 ಕೊಟ್ಟಿಗೆಪಾಳ್ಯ** | **ಹಾಗೂ ವಾರ್ಡ್‌ನ ನೋಡಲ್ ಅಧಿಕಾರಿ** |
| **ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ** | **ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ** |

**ಪ್ರತಿಗಳನ್ನು:–**

1. ಮಾನ್ಯ ಆಯುಕ್ತರು ರವರ ಅವಗಾಹನೆಗೆ ಸಲ್ಲಿಸಲಾಗಿದೆ.
2. ವಾರ್ಡ್ ಸಂಖ್ಯೆ–73ರ ಸಮಿತಿ ಅಧ್ಯಕ್ಷರು ಹಾಗೂ ಮುಖ್ಯ ಅಭಿಯಂತರವರಿಗೆ ಸಲ್ಲಿಸಿದೆ.
3. ಮಾನ್ಯ ಜಂಟಿ ಆಯುಕ್ತರು, ರಾರಾನಗರ ವಿಭಾಗ ರವರ ಅವಗಾಹನೆಗೆ ಸಲ್ಲಿಸಲಾಗಿದೆ.
4. ಕೌನ್ಸಿಲ್ ಕಾರ್ಯದರ್ಶಿ, ರವರ ಅವಗಾಹನೆಗೆ ಸಲ್ಲಿಸಲಾಗಿದೆ.
5. ಕಾರ್ಯಪಾಲಕ ಅಭಿಯಂತರರು, ರಾರಾನಗರ ವಿಭಾಗ ರವರ ಅವಗಾಹನೆಗೆ ಸಲ್ಲಿಸಲಾಗಿದೆ.
6. ಸಹಾಯಕ ಕಾರ್ಯಪಾಲಕ ಅಭಿಯಂತರರು ಘನತ್ಯಾಜ್ಯ ನಿರ್ವಹಣೆ ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
7. ಸಹಾಯಕ ಕಾರ್ಯಪಾಲಕ ಅಭಿಯಂತರರು ಲಗ್ಗೆರೆ ಉಪವಿಭಾಗ ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
8. ಸಹಾಯಕ ಕಾರ್ಯಪಾಲಕ ಅಭಿಯಂತರರು ಬೃಹತ್ ನೀರುಗಾಲುವೆ ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
9. ಸಹಾಯಕ ನಿರ್ದೇಶಕರು (ಪಶುಸಂಗೋಪನೆ) ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
10. ಸಹಾಯಕ ಕಾರ್ಯಪಾಲಕ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ, ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
11. ಸಹಾಯಕ ಕಾರ್ಯಪಾಲಕ ಅಭಿಯಂತರರು ಬೆಸ್ಕಾಂ, ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
12. ಪೋಲೀಸ್ ಇನ್ಸಪೆಕ್ಟರ್, ಕಾಮಾಕ್ಷಿಪಾಳ್ಯ ಠಾಣೆ, ನಾಗರಬಾವಿ ರವರ ಮಾಹಿತಿಗಾಗಿ ಸಲ್ಲಿಸಿದೆ.
13. ಆರೋಗ್ಯ ಪರಿವೀಕ್ಷಕರು, ಘನತ್ಯಾಜ್ಯ ರವರ ಮಾಹಿತಿಗಾಗಿ ಸಲ್ಲಿಸಿದೆ.

| | |
|---|---|
| **ಸದಸ್ಯ ಕಾರ್ಯದರ್ಶಿ** | **ವಾರ್ಡ್ ಸಮಿತಿ ಅಧ್ಯಕ್ಷರು,** |
| **ಹಾಗೂ ಸಹಾಯಕ ಅಭಿಯಂತರರು** | **ಮುಖ್ಯ ಅಭಿಯಂತರು(ರಾ.ರಾ.ನ)** |
| **ವಾರ್ಡ್ ನಂ. 73 ಕೊಟ್ಟಿಗೆಪಾಳ್ಯ** | **ಹಾಗೂ ವಾರ್ಡ್‌ನ ನೋಡಲ್ ಅಧಿಕಾರಿ** |
| **ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ** | **ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ** |